ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಬನಹಟ್ಟಿ

ಸಿ.ಸಿ.ನಂ.**2062/2024**

1) ಸುಜಾತಾ ಗಂಃ ಮಂಜುನಾಥ ಬಜ್ಜಿಗಾರ,
ಸಾಃ ರಬಕವಿ, ತಾಃ ರಬಕವಿ-ಬನಹಟ್ಟಿ.

.....ಫಿರ್ಯಾದಿದಾರ

– ವಿರುದ್ಧ –

1) ಮುತ್ತಪ್ಪ ತಂಃ ಯಲ್ಲಪ್ಪ ಹನಗಂಡಿ,
ಸಾಃ ರಬಕವಿ, ತಾಃ ರಬಕವಿ-ಬನಹಟ್ಟಿ.

.....ಆರೋಪಿ

– ಆಪಾದನೆ –

ನಾನು ಶ್ರೀಮತಿ ಸೌಮ್ಯ ಹೂಲಿ. ಬಿ.ಎ., ಎಲ್.ಎಲ್.ಬಿ., ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂಡಾಧಿಕಾರಿಗಳು ಬನಹಟ್ಟಿ , ತಾ:ರಬಕವಿ-ಬನಹಟ್ಟಿ ಹೊರೆಸುವ ಆಪಾದನೆ ಏನೆಂದರೆ,

ಆರೋಪಿತರಾದ ನೀವು ಪಿರ್ಯಾದುದಾರರಿಗೆ ಕಾನೂನುಬದ್ಧವಾಗಿ ಕೊಡಬೇಕಾಗಿದ್ದ ರೂ.3,00,000/- ಗಳ ಪಾವತಿಗಾಗಿ ನಿಮ್ಮ ಖಾತೆ ಇರುವ ಸ್ಟೇಟ್ ಬ್ಯಾಂಕ ಆಫ್ ಇಂಡಿಯಾ ಲಿ ಶಾಖೆ ರಬಕವಿ ಬ್ಯಾಂಕಿನ ಚೆಕ್ ನಂ.237722 ನ್ನು ರೂ.3,00,000/- ಗಳಿಗೆ 25.04.2024 ರ ದಿನಾಂಕ ನಮೂದಿಸಿ ಫಿರ್ಯಾದಿದಾರರಿಗೆ ನೀಡಿದ್ದು, ಅವರು ಅದನ್ನು ತಮ್ಮ ಬ್ಯಾಂಕಿನ ಮೂಲಕ ನಗದೀಕರಿಸಲು ಹಾಕಿದಾಗ ನಿಮ್ಮ ಬ್ಯಾಂಕಿನವರು **"Funds Insufficient"** ಎನ್ನುವ ಹಿಂಬರಹದೊಂದಿಗೆ ಸದರಿ ಚೆಕ್ಕು ನಗದೀಕರಣವಾಗದೇ ವಾಪಸ್ಸು ಬಂದಿದ್ದು, ಆ ಬಗ್ಗೆ ಫಿರ್ಯಾದಿದಾರರು ತಮ್ಮ ವಕೀಲರ ಮೂಲಕ ದಿನಾಂಕ 20.05.2024 ರಂದು ನಿಮಗೆ ಲೀಗಲ್ ನೋಟೀಸ್ ನೀಡಿದ್ದು, ಸದರಿ ನೋಟೀಸನ್ನು ನೀವು ದಿನಾಂಕಃ22.05.2024 ರಂದು ಸ್ವೀಕರಿಸಿದ್ದು, ನಂತರ 15 ದಿನಗಳು ಕಳೆದರೂ ಸಹ ನೀವು ಚೆಕ್ಕಿನಲ್ಲಿ ನಮೂದಿಸಿದ ಹಣ ಪಾವತಿಸದೇ ಲಿಖಿತ ವರ್ಗಾವಣೆಗಳ ಕಾಯ್ದೆ (N.I.Act) ಕಲಂ.138 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುವಿ ಅಂತಾ ಆಪಾದಿಸಲಾಗಿದೆ.

ಪ್ರಶ್ನೆ-1) ಈಗ ಓದಿ ಹೇಳಲಾದ ಆರೋಪಣೆ ತಿಳಿಯಿತೆ ?

ಉತ್ತರಃ- ತಿಳಿಯಿತು

ಪ್ರಶ್ನೆ-2) ಸದರಿ ಆರೋಪಣೆಯನ್ನು ಒಪ್ಪಿ ಕೊಳ್ಳುವಿರೋ ಅಥವಾ ವಿಚಾರಣೆ ಆಗಪಲು ಬಯಸುವಿರೊ ?

ಉತ್ತರಃ- ಇಲ್ಲ ವಿಚಾರಣೆ ಬೇಕು

ಮೇಲೆ ಹೇಳಲಾದ ಆರೋಪಣೆಯನ್ನು ಆರೋಪಿತನಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿದ ನಂತರ ಅವರು ನೀಡಿದ ಉತ್ತರವನ್ನು ಅವರ ಭಾಷೆಯಲ್ಲಿ ಬರೆದುಕೊಳ್ಳಲಾಯಿತು ಎಂದು ದೃಢೀಕರಿಸಲಾಗಿದೆ.

ಸ್ಥಳ ಃ ಬನಹಟ್ಟಿ
ದಿನಾಂಕ ಃ 14.11.2025

ಪ್ರ.ದ.ನ್ಯಾ. ದಂಡಾಧಿಕಾರಿಗಳು,
ಬನಹಟ್ಟಿ

ಆರೋಪಿಯ ಸಹಿ